International Journal of Kannada Research 2021; 7(4): 20-22

International Journal of Kannada Research
www.kannadajournal.com

ISSN: 2454–5813
IJKR 2021; 7(4): 20-22
© 2021 IJKR
www.kannadajournal.com
Received: 17-06-2021
Accepted: 08-08-2021

**ಡಾ.ಗಿರೇಗೌಡ ಅರಣ್ಯಹಳ್ಳಿ**
ಕನ್ನಡ ಅಧ್ಯಯನ ವಿಭಾಗ, *ಗಿಖವಿ*
ವಿಶ್ವಿದ್ಯಾಲಯ, ಬಳ್ಳಾರಿ,
ಕರ್ನಾಟಕ, ಭಾರತ

**Corresponding Author:**
**ಡಾ.ಗಿರೇಗೌಡ ಅರಣ್ಯಹಳ್ಳಿ**
ಕನ್ನಡ ಅಧ್ಯಯನ ವಿಭಾಗ, *ಗಿಖವಿ*
ವಿಶ್ವಿದ್ಯಾಲಯ, ಬಳ್ಳಾರಿ,
ಕರ್ನಾಟಕ, ಭಾರತ

# ಜನಪದ ಗಾದೆಮಾತುಗಳಲ್ಲಿ ಕಾಯಕಪ್ರಜ್ಞೆ

**ಡಾ. ಗಿರೇಗೌಡ ಅರಳಿಹಳ್ಳಿ**

ಜನಪದರ ಬದುಕಿನಾನುಭಗಳನ್ನು ಮೂಲದ್ರವ್ಯವಾಗಿಟ್ಟುಕೊಂಡಿರುವ ಜನಪದ ಸಾಹಿತ್ಯದ ಅನೇಕ ರೂಪಗಳಲ್ಲಿ ಗಾದೆಯೂ ಒಂದಾಗಿದೆ.ಇದು ಅತ್ಯಂತ ಜನಪ್ರಿಯವೂ, ವ್ಯಾಪಕವೂ, ಪ್ರಭಾವಶಾಲಿಯೂ, ಆಕರ್ಷಣೀಯವೂ, ಪ್ರಯೋಜನಕಾರಿಯೂ ಆಗಿದೆ.ಅನುಭವ ಜನ್ಯವಾದ ಗಾದೆಮಾತುಗಳಲ್ಲಿ ಒಂದು ರಾಷ್ಟ್ರದ ಪ್ರತಿಭೆ,ವಾಕ್ಚಾತುರ್ಯ ಮತ್ತು ಅಂತ:ಸ್ವತ್ವವನ್ನು ಕಾಣಬಹುದಾಗಿದೆ. ಜ್ಞಾನಿ–ಅಜ್ಞಾನಿ, ವೈದಿಕ–ಅವೈದಿಕ, ಬಡವ–ಶ್ರೀಮಂತ, ನಿರಕ್ಷರ–ಸಾಕ್ಷರ, ಆಳು–ಅರಸ, ಮೇಲು–ಕೀಳು ಎಂಬ ಭೇದಭಾವವಿಲ್ಲದೆ ಸರ್ವರನ್ನು ಆಕರ್ಷಿಸುವ ಪ್ರಕಾರವಾಗಿದೆ.

ಸರ್ವಾಂಟಿಸನ ಪ್ರಕಾರ ಗಾದೆಗಳೆಂದರೆ ದೀರ್ಘ ಅನುಭವದ ಮೇಲೆ ಕಟ್ಟಿದ ಸಂಕ್ಷಿಪ್ತ ವಾಕ್ಯ. ಲಾರೆಂಜನ ಪ್ರಕಾರ ಗಾದೆಗಳು ಶಬ್ದಗಳಲ್ಲಿ ಸಂಕ್ಷಿಪ್ತವಾಗಿದ್ದು ಜ್ಞಾನದಲ್ಲಿ ಅಗಾಧವಾಗಿರುತ್ತವೆ. ಹೀಗೆ ಜನತೆಯ ಮನಸ್ಸಿನ ಅಪ್ಪಟ ಧ್ವನಿಯಾದ ಗಾದೆಗಳು ಸಹಜ ಸ್ಥಿತಿಯಲ್ಲಿ ಜನರ ಮನಸಿನ ಓರೆಕೋರೆಗಳನ್ನು,ನೀತಿನಂಬಿಕೆಗಳನ್ನು ಸಹಜ ಸ್ಥಿತಿಯಲ್ಲಿ ಹುದುಗಿಸುಕೊಂಡಿರುತ್ತದೆ.ಈ ಹಿನ್ನೆಲೆಯಲ್ಲಿ ಜನಪದ ಗಾದೆ ಮಾತುಗಳಲ್ಲಿ ಹುದುಗಿರುವ ಕಾಯಕಪ್ರಜ್ಞೆಯನ್ನು ಅರಿಯುವ ಉದ್ದೇಶವನ್ನು ಹೊಂದಲಾಗಿದೆ.

ಕಾಯಕದಲ್ಲಿ ನಿರತನಾದಡೆ,
ಗುರು ದರ್ಶನವಾದಡೂ ಮರೆಯಬೇಕು.
ಲಿಂಗಪೂಜೆಯಾದಡೂ ಮರೆಯಬೇಕು.
ಜಂಗಮ ಮುಂದೆ ನಿಂದಿದ್ದಡೂ ಹಂಗು ಹರಿಯಬೇಕು.
ಕಾಯಕವೆ ಕೈಲಾಸವಾದ ಕಾರಣ,
ಅಮರೇಶ್ವರ ಲಿಂಗವಾಯಿತ್ತಾದಡೂ ಕಾಯಕದೊಳಗು

ಎಂಬ ಆಯ್ದಕ್ಕಿ ಮಾರಯ್ಯನ ಈ ವಚನ ವೀರಶೈವದ ಅಷ್ಟಾವರಣಗಳಲ್ಲಿ (ಗುರು,ಲಿಂಗ,ಜಂಗಮ,ವಿಭೂತಿ,ರುದ್ರಾಕ್ಷಿ,ಮಂತ್ರ,ಪಾದೋದಕ,ಪ್ರಸಾದ) ತ್ರಿಕೂಟಗಳೆಂದು ಕರೆಯಿಸಿಕೊಳ್ಳುವ ಗುರು ಲಿಂಗ ಜಂಗಮಕ್ಕಿಂತಲೂ ಕಾಯಕದ ಶ್ರೇಷ್ಟತೆ ಮತ್ತು ಮಹತ್ವವನ್ನು ಹೇಳುತ್ತದೆ.ಈ ಕಾಯಕದಿಂದಲೆ ವ್ಯಕ್ತಿಯ ವ್ಯಕ್ತಿತ್ವ ನಿರ್ಮಾಣವಾಗುತ್ತದೆ.ಕಾಯಕವು ವ್ಯಕ್ತಿಯ ಬಹಿರಂಗ ಮತ್ತು ಅಂತರಂಗದ ಶುದ್ಧಿಯ ಜೊತೆಗೆ ಸಮಾಜದ ಸ್ವಾಸ್ಥ್ಯವನ್ನು ಕಾಪಾಡುವಲ್ಲಿ ಬಲವಾದ ಸಾಧನವಾಗಿದೆ ಇಂತಹ ಕಾಯಕತತ್ವವನ್ನು ಜನಪದ ಗಾದೆಗಳಲ್ಲಿ ಅನಾವರಣಗೊಂಡ ಬಗೆಯನ್ನು ಇಲ್ಲಿ ಅರಿಯುವುದಾಗಿದೆ.

ಕಾಯಕ ಕೇವಲ ಜೀವನೋಪಾಯಕ್ಕೆ ಸೀಮಿತವಾಗಿರುವಂತದ್ದಲ್ಲ ಅದು ವ್ಯಕ್ತಿಯ ಮಾನಸಿಕ ಮತ್ತು ಶಾರೀರಿಕ ಸದೃಢತೆಗೆ ಕಾರಣವಾಗಿರುವಾಗಿರುವಂತೆ ಸಮಾಜದ ಸ್ವಾಸ್ಥ್ಯ ಕಾಪಾಡುವಲ್ಲಿಯೂ ಇದರ ಪಾತ್ರ ಮಹತ್ವದ್ದಾಗಿದೆ.ವ್ಯಕ್ತಿಯಲ್ಲಿಯ ಆಲಸ್ಯ,ಜಿಗುಪ್ಸೆಯನ್ನು ಹೋಗಲಾಡಿಸಿ ಆತ್ಮವಿಶ್ವಾಸವನ್ನು ಹೆಚ್ಚಿಸುತ್ತದೆ. ಈ ಹಿನ್ನಲೆಯಲ್ಲಿ ಕಾಯಕ ಮಾಡುವಂಥವರಿಗೆ ಮತ್ತು ನನ್ನಿಂದ ಈ ಕಾರ್ಯ ಅಸಾಧ್ಯವೆಂದು ಹಿಂದೆ ಸರಿಯುವಂಥವರಿಗೆ ಆತ್ಮಸ್ಥೈರ್ಯ ತುಂಬುವ ಕಾಯಕತತ್ವ ಪ್ರತಿಪಾದಿಸುವ ಮಾತುಗಳು ಜನಪದ ಗಾದೆಮಾತುಗಳಲ್ಲಿವೆ ‘ಅಂಜಬ್ಯಾಡಂದ್ರ ಆನಿಶಕ್ತಿ’ ಎಂಬ ಗಾದೆಮಾತು ಕಾಯಕಕ್ಕೆ ಪ್ರೇರೆಪಿಸುವ ಅಗತ್ಯತೆಯನ್ನು ಹೇಳುತ್ತದೆ. ಕಾರಣ ‘ಮನಸ ಮಾಡಿದರ ಮುಗಿಲಿಗಿ ಕೈ ಹಚ್ಬೌದು’ ಆದ್ದರಿಂದ ವ್ಯಕ್ತಿಗೆ ಅಸಾಧ್ಯವಾದುದು ಯಾವುದು ಇಲ್ಲ.

ಇದನ್ನರಿತು ವ್ಯಕ್ತಿ ಕಾಯಕತತ್ಪರನಾಗಬೇಕು. ಕಾಯಕದಲ್ಲಿ ಮೇಲು ಕೀಳು ಎಂಬ ಭೇದ ಭಾವವಿಲ್ಲ, ಯಾವ ಕಾಯಕವಾದರೂ ಕೂಡ ನಿಷ್ಠೆ ಮತ್ತು ಶ್ರದ್ಧೆಯಿಂದ ಮಾಡಬೇಕು. ಇವು ವ್ಯಕ್ತಿಯಲ್ಲಿ ಪ್ರಾಮಾಣಿಕತೆಯನ್ನು ಬೆಳೆಸುತ್ತವೆ.ಇವು ವ್ಯಕ್ತಿಯನ್ನು ಮೋಸ,ಸುಳ್ಳು,ಕಳ್ಳತನದಿಂದ ಮುಕ್ತನನ್ನಾಗಿಸುತ್ತದೆ.ಇದರಿಂದಾಗಿ ಕಾಯಕನಿರತ ವ್ಯಕ್ತಿ ಸಮಾಜದಲ್ಲಿ ಗೌರವಕ್ಕೆ ಪಾತ್ರನಾಗುತ್ತಾನೆ. ಕಾಯಕದಲ್ಲಿ ತೊಡಗಿಕೊಳ್ಳದಿದ್ದರೆ ಅದು 'ಅಗಸರ ನಾಯಿ ಹಳ್ಳನೂ ಕಾಣ್ಲಿಲ್ಲ ಮನೀನೂ ಕಾಯ್ಲಿಲ್ಲ' ಎನ್ನುವಂತಾಗಿ ಸಮಯವನ್ನು ವ್ಯರ್ಥವಾಗಿ ವ್ಯಯ ಮಾಡಿದಂತಾಗುತ್ತದೆ.ಹೀಗಾಗಿ ಯಾವುದಾದರೂ ತನಗೆ ಆಸಕ್ತಿ ಇರುವ ಮತ್ತು ತನ್ನ ಸಾಮರ್ಥಕ್ಕೆ ಯೋಗ್ಯವಾದ ಯಾವುದಾದರೂ ಒಂದು ನಿರ್ದಿಷ್ಟ ಕಾಯಕದಲ್ಲಿ ನಿರತನಾಗಿರಬೇಕು ಎನ್ನುವ ತತ್ವವನ್ನು ಪ್ರತಿಪಾದಿಸುತ್ತದೆ.ಇಂಥ ದೃಢ ನಿರ್ಧಾರವೆ ನಮ್ಮ ಗುರಿಯನ್ನು ಮುಟ್ಟಿಸಬಲ್ಲದು.ಇವೆರಡನ್ನು ಮೀರಿ ಕಾಯಕವನ್ನು ಆಯ್ಕೆ ಮಾಡಿಕೊಂಡರೆ ಅದು ' ಅಲ್ದ ಕೆಲಸಕ್ಕೆ ಹೋಗಿ ಹಲ್ಲ ಮುರಿಸ್ಗೊಂಡ್ರಂತ' ಎಂಬಂತಾಗುತ್ತದೆ. ಅಂದರೆ ಅಪಾಯಕ್ಕೆ ಕಾರಣವಾಗುತ್ತದೆ. ಅಲ್ಲದೆ ಇಂತಹ ಕಾಯಕದಿಂದ ಬದುಕನ್ನು ಕಟ್ಟಿಕೊಳ್ಳಲು ಸಾಧ್ಯವಾಗುವುದಿಲ್ಲ. ಆದ್ದರಿಂದ ತನ್ನ ಸಾಮರ್ಥ್ಯ ಮೀರಿ ಕಾಯಕದಲ್ಲಿ ತೊಡಗುವುದು ಎಂದರೆ ಅದು ' ಗುಡ್ಡ ಕೇದರಿ ಇಲಿ ಹಿಡಿದ್ರಂತ' ಎಂಬಂತಾಗುತ್ತದೆ. ಕಾಯಕಕ್ಕೆ ತಕ್ಕ ಫಲವನ್ನು ಇಂತಹ ಕಾರ್ಯಗಳಿಂದ ನಿರೀಕ್ಷಿಸುವುದಕ್ಕೆ ಸಾಧ್ಯವಾಗುವುದಿಲ್ಲ. ಅದನ್ನು ನಮ್ಮ ಜನಪದರು ' ಒಣದಕ ನೋಣ ಕಡೀತಂತ ' ಎಂಬಂತಾಗುತ್ತದೆ.ನಿಷ್ಪ್ರಯೋಜಕ ಕಾರ್ಯಗಳಲ್ಲಿ ತೊಡಗಿಕೊಳ್ಳುವಿಕೆಯನ್ನು ಈ ಮಾತು ಅಲ್ಲಗಳೆಯುತ್ತದೆ.

ಅತಿಯಾದ ಆಸೆ ವ್ಯಕ್ತಿಯ ಕಾಯಕ ನಿಷ್ಠೆ ಬದಲಾಗುವುದಕ್ಕೆ ಕಾರಣವಾಗುತ್ತದೆ. ಇದರಿಂದ ವ್ಯಕ್ತಿ ತನ್ನ ಸ್ವ–ಸಾಮರ್ಥ ಮೀರಿ ಆಸೆ ಪಡುತ್ತಾನೆ.ಇದು ' ನೆಲವಿಗ ಹಾರ್ಲಾರ್ದ ಬೆಕ್ಕು ಆಕಾಶಕ ಹಾರ್ದಂಗ' ಎನ್ನುವ ಸ್ಥಿತಿ ನಿರ್ಮಾಣವಾಗುತ್ತದೆ.ಇದರಿಂದಾಗಿ ವ್ಯಕ್ತಿ ಅತಂತ್ರಕ್ಕೆ ಒಳಗಾಗುತ್ತಾನೆ. ಕಾಯಕದಲ್ಲಿ ಮಾತಿಗಿಂತ ಕೃತಿಗಿಂತ ಮುಖ್ಯ. ಆದರೆ ಕೆಲ ವ್ಯಕ್ತಿಗಳು ಮಾತಿಗೆ ಮಾತ್ರ ಸಿಮೀತರಾಗುತ್ತಾರೆ.ಅಂಥವರು ' ಕಟ್ಟೀಗಿ ಹಾರ್ಲಾರ್ದ ಬೆಕ್ಕ ಬೆಟ್ಟ ಹಾರ್ತಿನಿ ಅಂತೀತಂತ' ಎಂಬಂತಾಗುತ್ತದೆ. ಮಾತುಗಳನ್ನಾಡುವ ಮೂಲಕ ಕೆಲವು ದಿನ ಕೆಲವು ವ್ಯಕ್ತಿಗಳನ್ನು ಆಕರ್ಷಿಸಬಹುದು. ಆ ವ್ಯಕ್ತಿಯ ಮಾತಿಗೂ ಕೃತಿಗೂ ವ್ಯತ್ಯಾಸ ಕಂಡು ಬಂದಾಗ ಅವರ ವಿಶ್ವಾಸ ಕಳೆದುಕೊಳ್ಳುವ ಸ್ಥಿತಿ ಬಂದೊದಗುತ್ತದೆ.ಅದನ್ನೆ ' ಮಾತ ಮನಾರ ಕೆಲಸ ಸುಮಾರ' ಎಂದು ಆಡಿಕೊಳ್ಳುವಂತಾಗುತ್ತದೆ.ಆದಕಾರಣ ಕಾಯಕದಲ್ಲಿ ನಡೆ–ನುಡಿ ಸಾಮ್ಯತೆಯನ್ನು ಅನುಸರಿಸಿಕೊಂಡು ನಡೆಯಬೇಕೆನ್ನುವ ತತ್ವವನ್ನು ಪ್ರತಿಪಾದಿಸುತ್ತದೆ.ಆ ಮೂಲಕ ನಾವು ಮಾತನಾಡುವ ಬದಲು ನಮ್ಮ ಕಾಯಕ ಮಾಡಬೇಕು ಎಂಬ ಪ್ರಜ್ಞೆಯನ್ನು ರೂಢಿಸಿಕೊಳ್ಳುವ ಅನಿವಾರ್ಯತೆಯನ್ನು ಪ್ರತಿಪಾದಿಸುತ್ತದೆ.

ದೈಹಿಕ ಮತ್ತು ಮಾನಸಿಕ ಸದೃಢತೆಗೆ ಕಾರಣವಾದ ಕಾಯಕ ಜೀವನೋಪಾಯಕ್ಕೂ ಆಧಾರವಾಗಿದೆ. ಮಾಡುವ ಕಾಯಕಕ್ಕೆ ತಕ್ಕ ಫಲ ದೊರೆಯಬೇಕು. ಹೀಗೆ ಬಂದ ಫಲವನ್ನು ಸತ್ಕಾರ್ಯಗಳಿಗೆ ವಿನಿಯೋಗಿಸಬೇಕು. ಆದರೆ ಕೆಲವರು ತಮ್ಮ ತಮ್ಮ ದುಡಿತದ ಫಲವನ್ನು ಅನಾಯಾಸವಾಗಿ ಕೆಟ್ಟ ಕಾರ್ಯಗಳಿಗೆ ಬಳಸುವಂತದ್ದನ್ನು ಕಾಣುತ್ತೆವೆ.ಇದು ' ತನ್ನ ಕುಣಿ ತಾನೇ ತೊಡ್ಕೊಂಡ' ಎಂಬತಾಗುತ್ತದೆ. ಅಲ್ಲದೆ ಹಣ– ಸಂಪತ್ತು ಸಂಪಾದನೆಗಾಗಿ ಅಡ್ಡದಾರಿ ಹಿಡಿಯುವಿಕೆಯಿಂದುಂಟಾಗುವ ಪರಿಣಾಮಗಳನ್ನು ಕಟ್ಟಿಕೊಡುತ್ತದೆ. ಮತ್ತೊಂದು ಗಾದೆಮಾತು ' ಮುಂಜಾನಿ ಸತ್ರ ಮಣ್ಣಿಗಿಲ್ಲ ಸಂಜೀಕಿ ಸತ್ರ ಎಣ್ಣೆಗಿಲ್ಲ' ಎಂಬುದು ಕಾಯಕ ಮಾಡದೆ ಇರುವಿಕೆಯನ್ನು ಹೇಳುವಿಕೆಯ ಜೊತೆಗೆ ಕಾಯಕಕ್ಕೆ ತಕ್ಕಫಲ ದೊರೆಯದೆ ಇರುವಿಕೆಯನ್ನು ಹೇಳುತ್ತದೆ. ಕಾಯಕದಿಂದ ಫಲವನ್ನು ಉಳಿಕೆ ಮಾಡದೆ ವ್ಯರ್ಥ ವ್ಯಯ ಮಾಡಿರುವುದನ್ನು ಕೂಡ ಪ್ರತಿಪಾದಿಸುತ್ತದೆ. ಆ ಮೂಲಕ ಕಾಯಕ ಮಾಡುವ ಮತ್ತು ಕಾಯಕದಿಂದ ಫಲವನ್ನು ಅಲ್ಪ ಕೂಡಿಟ್ಟರೆ ಅದು ಆಪತ್ಕಾಲದಲ್ಲಿ ಬಳಸಿಕೊಳ್ಳಲು ನೆರವಾಗುತ್ತದೆ. ಆಗ ಅನ್ಯರನ್ನು ಕೇಳುವ ಪ್ರಮೇಯವೆ ಬರುವುದಿಲ್ಲ. ಇದರಿಂದಾಗಿ ಸ್ವಾಭಿಮಾನಿಯಾಗಿ ಬದುಕಲು ಸಾಧ್ಯವಾಗುತ್ತದೆ.

ಕಾಯಕ ತತ್ವಕ್ಕೆ ಬದ್ಧವಾಗಿ ಸ್ವಾಭಿಮಾನಿಯಾಗಿ ಬದುಕುತ್ತಿದ್ದರು ಈ ನಮ್ಮ ಸಮಾಜದ ಕೆಲ ದುಷ್ಟ ಶಕ್ತಿಗಳು ಅಡ್ಡಿಯನ್ನುಂಟುಮಾಡುತ್ತವೆ.ತನ್ನಿಂದ ಆಗದೆ ಇರುವುದನ್ನು ಅವರು ಸಾಧಿಸಿದರು ಎಂಬ ಅಸೂಯೆಯಿಂದ ತೊಂದರೆ ಕೊಡುವ,ನಿಂದಿಸುವ ಮಾತುಗಳನ್ನಾಡುತ್ತಾರೆ.ಇಂತಹ ಮಾತುಗಳಿಗೆ ಕಾಯಕ ನಿರತ ವ್ಯಕ್ತಿ ಪ್ರತಿಕ್ರಿಯೆಯನ್ನು ಕೊಡದೆ ಇರುವುದೆ ಒಳಿತು.ಅದನ್ನೆ ಜನಪದರು 'ಆನಿ ಹೋಗ್ತಿರ್ತದ ನಾಯಿ ಬೊಗಳ್ತಿರತದ' ಎಂಬ ನುಡಿಗಳನ್ನಾಡಿದ್ದಾರೆ. ಮತ್ತಷ್ಟು ವಿಕೃತ ಮನಸುಗಳು ಮುಂದುವರೆದು ಅನೇಕ ತೊಂದರೆಗೊಳಗಾಗುವಂತೆ ಮಾಡಿ ಕಾಯಕ ತೊರೆಯುವಂತೆ ಮಾಡಿ ಆತನ ಬದುಕನ್ನು ಕದಡುವ ಕಾರ್ಯ ಮಾಡಿಯೆ ಬಿಡುತ್ತಾರೆ.ಅದನ್ನೆ ಜನಪದರು ' ಆಯ್ಕೊಂಡು ತಿಂಬಾ ಕೋಳಿ ಕಾಲ ಮುರ್ದಂಗ' ಎಂಬ ಮಾತುಗಳಲ್ಲಿ ಆ ತಾತ್ಪರ್ಯವನ್ನು ಹಿಡಿದಿಟ್ಟಿದ್ದಾರೆ. ಸಮಾಜದ ಕೆಲ ವಿಕೃತ ಮನಸುಗಳಿಗೆ ಬೇರೆಯವರು ನೆಮ್ಮದಿಯಿಂದ ಇರುವುದು ಇಷ್ಟವಾಗುವುದಿಲ್ಲ.ಅಲ್ಲದೆ ಅವರಿಗೆ ಬೇರೆಯವರು ಬೇಡಿ ತಿಂದರೆ ನೆಮ್ಮದಿ ಎನ್ನುವ ರೀತಿಯಲ್ಲಿ ವರ್ತಿಸುತ್ತಾರೆ.ಇಂತವರ ಮಧ್ಯೆ ಜೀವನೋಪಾಯಕ್ಕೆ ಕಾಯಕ ಮಾಡಿದರು ಕೂಡ ತೊಂದರೆ ತಪ್ಪಿದ್ದಲ್ಲ ಅದನ್ನೆ ' ಮಾಡುಂಡ್ರ ಮಂದಿ ಕಾಟ ಬೇಡುಂಡ್ರ ನಾಯಿ ಕಾಟ' ಎಂದಿದ್ದಾರೆ.

ಕಾಯಕ ಮಾಡದೆ ಬದುಕನ್ನು ನಡೆಸುವುದು ದುಸ್ತರ ' ಉಗುಳು ನುಂಗಿದ್ರ ಹೊಟ್ಟಿ ತುಂಬಲ' ಎಂಬ ಗಾದೆಮಾತು ಪರರಿಂದ ಪಡೆದು ಅಥವಾ ಪರರ ದುಡಿಮೆಯಲ್ಲಿ ತಿನ್ನುವುದು ವ್ಯಕ್ತಿಯ ಸಭ್ಯತೆಗೆ ಒಪ್ಪುವಂತದ್ದಲ್ಲ. ಆದ್ದರಿಂದ ಯಾವುದಾದರೂ ಒಂದು ಕಾಯಕವನ್ನು ಮಾಡಲೇಬೇಕು ಅಂದಾಗ ಮಾತ್ರ ಬದುಕನ್ನು ಕಟ್ಟಿಕೊಳ್ಳಲು ಸಾಧ್ಯ.ಹೀಗಾಗಿ ನಮ್ಮ ನಮ್ಮ ಸಾಮರ್ಥಕ್ಕೆ ತಕ್ಕುದಾದ ಕಾಯಕವನ್ನು ಮಾಡಬೇಕು.ಅವರವರ ಶಕ್ತಿ,ಸಾಮರ್ಥ,ವಿದ್ಯೆ,ಜ್ಞಾನಕ್ಕನುಗುಣವಾಗಿ ಕಾರ್ಯವನ್ನು ಮಾಡಬೇಕು ' ಆನಿವಜ್ಜಿ ಆನಿಗಿ ಕುದರಿವಜ್ಜಿ ಕುದರಿಗಿ' ಹೀಗಾಗಿ ಬೇರೊಬ್ಬರ ಸ್ಥಿತಿಗತಿಗಳನ್ನು ನೋಡಿ ಅಸೂಯೆ ಪಟ್ಟುಕೊಳ್ಳದೆ ಕಾಯಕದಲ್ಲಿ ನಿರತನಾಗಬೇಕು ಅಂದಾಗ ಉತ್ತಮ ಜೀವನವನ್ನು ನಡೆಸಲು ಸಾಧ್ಯವಾಗುತ್ತದೆ

ಕಾಯಕದಲ್ಲಿ ಯಶಸ್ಸು ಪಡೆಯಲು ನಿಷ್ಠೆ,ಪ್ರಾಮಾಣಿಕತೆ,ಧೈರ್ಯ ಮುಖ್ಯವಾಗುತ್ತವೆ. ಯಾವುದೇ ಕಾರಣಕ್ಕೂ ಸೋಮಾರಿತನ ಸಲ್ಲದು ಅದನ್ನೆ ಜನಪದರು ' ಅಳ್ಕೋತ ಅಗಸಿ ಕಾಯಣ ಜಯ ಹ್ಯಾಂಗ ಸಿಗ್ತದ' ಎಂಬ ನುಡಿಗಳಲ್ಲಿ ಹೇಳಿದ್ದಾರೆ.ಸ್ಪರ್ಧೆಯ ಮುಂಚೆಯೆ ನಾವು ಸೋಲನ್ನು ಒಪ್ಪಿಕೊಂಡಂತಾಗುತ್ತದೆ. ಆದಕಾರಣ ಕಾಯಕದಲ್ಲಿ ಈ ಮೇಲಿನ ಗುಣಗಳನ್ನು ರೂಢಿಸಿಕೊಳ್ಳಬೇಕೆಂಬುದನ್ನು ಸಾರುತ್ತದೆ. ಕಾಯಕದಲ್ಲಿ ಪರರ ಮೇಲೆ ಅವಲಂಬಿತರಾಗಬಾರದು. ನಮ್ಮ ಸಾಮರ್ಥವನ್ನು ತೋರ್ಪಡಿಸಬೇಕು. ಸಾಮರ್ಥವಿದ್ದರೂ ಕೂಡ ಪರರಿಂದ ಅದನ್ನು ಮಾಡಿಸಲು ಸೋಮಾರಿತನ ತೋರಿ ಹಿಂಜರಿಯುವುದೂ ಕೂಡ

ಒಳಿತಲ್ಲ. ಇದನ್ನೆ ಜನಪದರು ' ಕುದ್ರೀಗಿ ನೋಡಿ ಕಾಲ ಬ್ಯಾನಿ ಅಂದ್ರಂತ' ಎಂಬ ನುಡಿ ಹುಟ್ಟಿಕೊಂಡಂತಿದೆ.

ಒಟ್ಟಾರೆ ಈ ಮೇಲಿನ ಜನಪದ ಗಾದೆಗಳಲ್ಲಿ ಜೀವನ ನಿರ್ವಹಣೆಗೆ ಕಾಯಕದ ಅಗತ್ಯತೆ ಮತ್ತು ಕಾಯಕದ ಯಶಸನ್ನು ಕುರಿತಂತೆ,ಕಾಯಕದಲ್ಲಿ ನಿರತನಾದವನಿಗೆ ಉಂಟಾಗುವ ಅಡ್ಡಿ-ಆತಂಕಗಳಳಾವವು,ಸಾಮರ್ಥ ಮೀರಿ ಆಸೆ ಪಡುವುದರಿಂದುಂಟಾಗುವ ಅಪಾಯಗಳೇನು, ವ್ಯರ್ಥಕಾರ್ಯ ಮತ್ತು ಕೆಟ್ಟಕಾರ್ಯದ ಪರಿಣಾಮಗಳಾವವು, ಮಾತು-ಕೃತಿಗೂ ಇರುವ ವ್ಯತ್ಯಾಸದಿಂದುಂಟಾಗುವ ಪರಿಣಾಮಗಳಾವವು, ಕಾಯಕದಲ್ಲಿ ಸೋಮಾರಿತನ ಸಲ್ಲದು ಇನ್ನು ಮುಂತಾದ ಕಾಯಕಪ್ರಜ್ಞೆಯ ಚಿಂತನೆಗಳು ಜನಪದರ ಅನುಭವ ಜನ್ಯ ಗಾದೆಮಾತುಗಳಲ್ಲಿ ಅಭಿವ್ಯಕ್ತಿಗೊಂಡಿರುವುದು ವಿದಿತವಾಗುತ್ತದೆ.

### ಆಕರ ಗ್ರಂಥಗಳು


1. ಆಯ್ದ ಗಾದೆ ಮತ್ತು ಒಗಟುಗಳು – ಸಂ. ಡಾ.ವೀರಣ್ಣ ದಂಡೆ
2. ಜಾನಪದ ಅಧ್ಯಯನ – ದೇ.ಜವರೇಗೌಡ
3. ಜನಪದ ಸಾಹಿತ್ಯ ರೂಪಗಳು– ರಾಗೌ
4. ಜನಪದ ಸಾಹಿತ್ಯ ಪ್ರಕಾರಗಳು –ಸಂ. ತೀ.ನಂ.ಶಂಕರನಾರಾಯಣ, ಎಂ.ಎನ್.ವೆಂಕಟೇಶ
5. ಜಾನಪದ ಕೈಪಿಡಿ– ಪ್ರ.ಸಂ. ಹೆಚ್.ಜೆ.ಲಕ್ಕಪ್ಪಗೌಡ